ಸಂಪುಟ : 40 ಸಂಚಿಕೆ:257 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 13 ಅಕ್ಟೋಬರ್ 2017 ಶುಕ್ರವಾರ POST REG NO . L-2/RNP- 364/TMR/2015-17 ಪುಟಗಳು :12 ಬೆಲೆ ₹ 2.50

ತುಮಕೂರು | Tumakuru

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳ ಪ್ರಾದೇಶಿಕ ದಿನಪತ್ರಿಕೆ

# ಪ್ರಜಾ ಪ್ರಗತಿ

ಉಪ ಸಂಪಾದಕರು : ಟಿ.ಎನ್.ಮಧುಕರ್ ಸಂಪಾದಕರು : ಎಸ್. ನಾಗಣ್ಣ

E-mail : For News: prajapragathi1@gmail.com
For Advertisements: prajapragathiadds@gmail.com
Web : prajapragathi.com



ರಾಜ್ಯಪಾಲರು ಕೇಂದ್ರ-ರಾಜ್ಯಗಳ ಸಂಬಂಧ ಬಲಪಡಿಸಬೇಕು : ರಾಷ್ಟ್ರಪತಿ ರಾಮನಾಥ್ ಕೋವಿಂದ್

ವಿವರ : ಪುಟ 5

ಟಿ-20 ಕ್ರಿಕೆಟ್ : ಇಂದು ಸಂಜೆ 7 ಕ್ಕೆ ಹೈದರಾಬಾದ್ ನಲ್ಲಿ ಭಾರತ-ಆಸ್ಟ್ರೇಲಿಯಾ ನಡುವೆ ಪಂದ್ಯ

ವಿವರ : ಪುಟ 5






ಪೆರೋಲ್ ಮುಕ್ತಾಯ:ಮತ್ತೆ ಪರಪ್ಪನ ಅಗ್ರಹಾರ ಜೈಲು ಸೇರಿದ ಶಶಿಕಲಾ

ವಿವರ : ಪುಟ 12

ಗೌರಿಲಂಕೇಶ್ ಹತ್ಯೆ: ಹೊರ ರಾಜ್ಯದವರ ಕೈವಾಡ ಶಂಕೆ - ಗೃಹ ಸಚಿವ ರಾಮಲಿಂಗಾರೆಡ್ಡಿ

ವಿವರ : ಪುಟ 5



Gold 916 ₹ 2780/-
Silver ₹ 41000/-
ಸೂರ ಜ್ಯೂಯಲರ್ಸ್
Ashoka Road, Tumkur
Ph: 0816 4022274

Marg The Business Backbone Marg ERP 9+
GST Billing Software
ACS ALPHA Computer Service
9448153838

## ಇಂದಿನ ಮೊಟ್ಟೆ ಧಾರಣೆ

(ಬೆಂಗಳೂರಿನಲ್ಲಿ)
100ಕ್ಕೆ - 385 ರೂ.
1ಕ್ಕೆ - 3.85 ಪೈ.
ಕೃಪೆ:ಎನ್ಇಸಿಸಿ

## ಹಿಮಾಚಲ ಪ್ರದೇಶ ಚುನಾವಣೆ ಪ್ರಕಟ

ನವದೆಹಲಿ

ಹಿಮಾಚಲ ಪ್ರದೇಶ ವಿಧಾನಸಭಾ ಚುನಾವಣೆಯ ದಿನಾಂಕವನ್ನು ಕೇಂದ್ರ ಚುನಾವಣಾ ಆಯೋಗ ಪ್ರಕಟಿಸಿದೆ. ಆಯೋಗದ ಆಯುಕ್ತ ಎ.ಕೆ. ಜ್ಯೋತಿ ಅವರು ಮಾಹಿತಿ ನೀಡಿ 68 ವಿಧಾನಸಭಾ ಕ್ಷೇತ್ರಗಳಿಗೆ ನವೆಂಬರ್ 9 ರಂದು ಚುನಾವಣೆ ನಡೆಯಲಿದ್ದು, ಡಿಸೆಂಬರ್ 18 ಕ್ಕೆ ಮತ ಎಣಿಕೆ ಕಾರ್ಯ ಮುಗಿಯಲಿದೆ.

## ಗೊರಕ್‌ಪುರ್ ದುರಂತ: 69 ಮಕ್ಕಳು ಸಾವು

ಲಕ್ನೋ

ಉತ್ತರ ಪ್ರದೇಶ ಗೋರಕ್‌ಪುರದ ಬಿ.ಆರ್.ಡಿ. ಆಸ್ಪತ್ರೆಯಲ್ಲಿ ಕಳೆದ ನಾಲ್ಕು ದಿನಗಳಲ್ಲಿ 69 ಮಕ್ಕಳು ಮೃತಪಟ್ಟಿದ್ದಾರೆ. ಕಳೆದ 2 ತಿಂಗಳ ಹಿಂದೆ ಇದೇ ಗೋರಕ್‌ಪುರದ ಬಾಬಾ ರಾಘವದಾಸ್ ಮೆಡಿಕಲ್ ಕಾಲೇಜು ಆಸ್ಪತ್ರೆಯಲ್ಲಿ ಕಳೆದ ತಿಂಗಳು ಆಕ್ಸಿಜನ್ ಕೊರತೆಯಿಂದ 60 ಮಕ್ಕಳು ಮೃತಪಟ್ಟಿದ್ದವು.

## ಆರುಶಿ ಪ್ರಕರಣ: ಶಿಕ್ಷೆಯಿಂದ ಖುಲಾಸೆ

ನವದೆಹಲಿ

ಇಡೀ ದೇಶವನ್ನು ಬೆಚ್ಚಿಬೀಳಿಸಿದ್ದ ಆರುಶಿ ತಲ್ವಾರ್ ಹೇಮರಾಜ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ನ್ಯಾಯಾಲಯ ನೀಡಿದ್ದ ತೀರ್ಪನ್ನು ಅಲಹಾಬಾದ್ ಹೈಕೋರ್ಟ್ ರದ್ದುಗೊಳಿಸಿದೆ. ಆರೋಪಿಗಳಾದ ಆರುಶಿ ಹೆತ್ತವರಾದ ಡಾ.ರಾಜೇಶ್ ತಲ್ವಾರ್, ನೂಪರ್ ತಲ್ವಾರ್ ಅವರನ್ನು ಜೀವಾವಧಿಯಿಂದ ಖುಲಾಸೆಗೊಳಿಸಲಾಗಿದೆ. 2013 ರಲ್ಲಿ ಸಿಬಿಐ ವಿಶೇಷ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿತ್ತು. ಈ ತೀರ್ಪು ಪ್ರಶ್ನಿಸಿ ಅಲಹಾಬಾದ್ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗಿತ್ತು.

## ಚೀನಾದಲ್ಲಿ ಪ್ರವಾಹ 37 ಬಲಿ

ವಿಯೆಟ್ನಾಂ

ಎಡೆಬಿಡದೆ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ಚೀನಾದ ವಿಯೆಟ್ನಾಂ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಪ್ರವಾಹ ಮತ್ತು ಭೂ ಕುಸಿತದಿಂದಾಗಿ 37 ಮಂದಿ ಬಲಿಯಾಗಿದ್ದಾರೆ. ಸಾವಿರಾರು ಮನೆಗಳು ಜಖಂಗೊಂಡಿವೆ. 2 ಲಕ್ಷಕ್ಕೂ ಅಧಿಕ ನಾಗರೀಕರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ.

## ಚಿತ್ರದುರ್ಗದಲ್ಲಿ ಹೆಚ್ಚು ಮಳೆ

ಬೆಂಗಳೂರು

ರಾಜ್ಯದ ಒಳನಾಡಿನಲ್ಲಿ ನೈರುತ್ಯ ಮುಂಗಾರು ಚುರುಕುಗೊಂಡಿದೆ. ಕರಾವಳಿ ಪ್ರದೇಶದ ಕೆಲವು ಕಡೆ ಮಳೆಯಾಗಿದೆ. ಚಿತ್ರದುರ್ಗದಲ್ಲಿ ಅತಿ ಹೆಚ್ಚು 11 ಸೆಂಟಿ ಮೀಟರ್ ಮಳೆಯಾಗಿದೆ. ಜಿಕೆವಿಕೆ 9, ಎಚ್ ಬಿ ಹಳ್ಳಿ 8, ಹುನಗುಂದ, ಚಿಂತಾಮಣಿ ಪಿಟಿಬಿ, ಬಳ್ಳಾರಿ, ಚನ್ನಗಿರಿಯಲ್ಲಿ ತಲಾ 7 ಸೆಂಟಿ ಮೀಟರ್ ಮಳೆಯಾಗಿದೆ. ಮಧುಗಿರಿಯಲ್ಲಿ ತಲಾ 6 ಸೆಂಟಿ ಮೀಟರ್ ಮಳೆಯಾಗಿದೆ.

# ಸೌರ ಘಟಕ ಕೌಶಲ್ಯ ಅಭಿವೃದ್ಧಿ ಕೇಂದ್ರ ಸ್ಥಾಪನೆ

## ಕಬ್ಬಿಗೆರೆಯಲ್ಲಿ ಅಭಿವೃದ್ಧಿ ಕಾಮಗಾರಿ ಪರಿವೀಕ್ಷಿಸಿ ಡಾ|| ಸುಭಾಷ್ ಚಂದ್ರ ಕುಂಟಿಆ ನುಡಿ

ತುಮಕೂರು

ಹಸಿರು ಶಕ್ತಿ ಯೋಜನೆಯಡಿ ಆಯ್ಕೆಯಾಗಿದ್ದ ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಕಬ್ಬಿಗೆರೆ ಸುತ್ತಮುತ್ತಲಿನ ಐದು ಗ್ರಾಮಗಳ ವ್ಯಾಪ್ತಿಯಲ್ಲಿ ಸೋಲಾರ್ ಘಟಕ ಹಾಗೂ ಕೌಶಲ್ಯ ಅಭಿವೃದ್ಧಿ ಕೇಂದ್ರವನ್ನು ಸ್ಥಾಪಿಸಲಾಗುವುದು ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ: ಸುಭಾಷ್ ಚಂದ್ರ ಕುಂಟಿಆ ಅವರು ತಿಳಿಸಿದರು.

ಹಸಿರು ಶಕ್ತಿ ಯೋಜನೆಯ ಐದು ಗ್ರಾಮಗಳಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ಪರಿವೀಕ್ಷಣೆ ನಡೆಸಿದ ನಂತರ ಈ ಗ್ರಾಮಗಳ ಗ್ರಾಮಸ್ಥರು ಕಬ್ಬಿಗೆರೆಯಲ್ಲಿ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಕಳೆದ 2002ರಿಂದ 2005ರವರೆಗೆ ಹಸಿರು ಶಕ್ತಿ ಯೋಜನೆಯ ಸಮನ್ವಯಾಧಿಕಾರಿಯಾಗಿ ಕಬ್ಬಿಗೆರೆ, ಅಜ್ಜೇನಹಳ್ಳಿ, ಚಿಕ್ಕರಸನಹಳ್ಳಿ, ಚಿಕ್ಕಣ್ಣನಹಳ್ಳಿ, ಒಬನಹಳ್ಳಿ ಹಾಗೂ ಮಜರಗೊಲ್ಲರಹಟ್ಟಿಯಲ್ಲಿ ಯೋಜನೆಯ ಅನುಷ್ಠಾನಗೊಳಿಸಲಾಗಿತ್ತು. ಕೃಷಿ, ತೋಟಗಾರಿಕೆ, ಅರಣ್ಯ ಹಾಗೂ ಭಾರತೀಯ ಆಗ್ರೋ ಇಂಡಸ್ಟ್ರೀಸ್ ಮತ್ತಿತರ ಸ್ವಯಂಸೇವಾ

> ಎಷ್ಟು ಮರಗಳನ್ನು ಬೆಳೆಸುತ್ತಿರೋ, ಅಷ್ಟು ಮಳೆ ಬರುತ್ತದೆ. ಕಳೆದ 12 ವರ್ಷಗಳ ಹಿಂದೆ ಗಿಡಗಳನ್ನು ಹಾಕಲು ಪ್ರಯತ್ನಿಸಿದ್ದರಿಂದ ಇಂದು ಎಲ್ಲೆಲ್ಲೋ ಹಸಿರು ಕಾಣಿಸುತ್ತಿದೆ. ಕೇವಲ ಐದು ಹಳ್ಳಿಗಳು ಹಸಿರು ಬೆಳೆಸಿದರೆ ಸಾಲದು. ಎಲ್ಲಾ ಹಳ್ಳಿಗಳು ಮುಂದಾಗಬೇಕು. ಗ್ರಾಮಗಳು ಅಭಿವೃದ್ಧಿಯಾಗಬೇಕಾದರೆ ಗ್ರಾಮ ಯಾವ ರೀತಿಯಲ್ಲಿ ಅಭಿವೃದ್ಧಿಯಾಗಬೇಕು ಎಂಬುದನ್ನು ಗ್ರಾಮಸ್ಥರೇ ನಿರ್ಧರಿಸಬೇಕು.
>
> - ಡಾ: ಸುಭಾಷ್ ಚಂದ್ರ ಕುಂಟಿಆ, ಸರ್ಕಾರದ ಮುಖ್ಯ ಕಾರ್ಯದರ್ಶಿ



ಸಂಸ್ಥೆಗಳ ಸಹಯೋಗದೊಂದಿಗೆ ಮಳೆ ನೀರು ಕೊಯ್ಲು, ಶೌಚಾಲಯ, ಸಾಮೂಹಿಕ ನೀರಾವರಿ, ಕೃಷಿಹೊಂಡ, ಉರುವಲಿನಿಂದ ವಿದ್ಯುತ್ ಚಕ್ತಿಯಾಗಿ ಪರಿವರ್ತಿಸುವ ಗ್ಯಾಸಿಫೈಯರ್ ಹಾಗೂ ಮರಗಳನ್ನು ನೆಡುವ ಕಾರ್ಯಕ್ಕೆ ಚಾಲನೆ ನೀಡಲಾಗಿತ್ತು. ಎಲ್ಲರ ಪ್ರಯತ್ನದಿಂದಾಗಿ ಈ ಯೋಜನೆಯ ಗ್ರಾಮಗಳು ಹಸಿರುಮಯವಾಗಿವೆ ಎಂದು ಸಂತಸ ವ್ಯಕ್ತಪಡಿಸಿದರು.

ಎಷ್ಟು ಮರಗಳನ್ನು ಬೆಳೆಸುತ್ತಿರೋ, ಅಷ್ಟು ಮಳೆ ಬರುತ್ತದೆ. ಕಳೆದ 12 ವರ್ಷಗಳ ಹಿಂದೆ ಗಿಡಗಳನ್ನು ಹಾಕಲು ಪ್ರಯತ್ನಿಸಿದ್ದರಿಂದ ಇಂದು ಎಲ್ಲೆಲ್ಲೋ ಹಸಿರು ಕಾಣಿಸುತ್ತಿದೆ. ಕೇವಲ ಐದು ಹಳ್ಳಿಗಳು ಹಸಿರು ಬೆಳೆಸಿದರೆ ಸಾಲದು. ಎಲ್ಲಾ ಹಳ್ಳಿಗಳು ಮುಂದಾಗಬೇಕು. ಗ್ರಾಮಗಳು ಅಭಿವೃದ್ಧಿಯಾಗಬೇಕಾದರೆ ಗ್ರಾಮ ಯಾವ ರೀತಿಯಲ್ಲಿ ಅಭಿವೃದ್ಧಿಯಾಗಬೇಕು ಎಂಬುದನ್ನು ಗ್ರಾಮಸ್ಥರೇ ನಿರ್ಧರಿಸಬೇಕು ಎಂದು ಅವರು ಹೇಳಿದರು.

ಶೇ.100ರಷ್ಟು ಬಯಲು ಶೌಚಮುಕ್ತ ಗ್ರಾಮಗಳಾಗಬೇಕು. ಪ್ರತಿ ಮನೆಯು ಶೌಚಾ ಲಯಗಳನ್ನು ಹೊಂದಬೇಕು ಎಂಬ ನಿಟ್ಟಿನಲ್ಲಿ ಈ ಯೋಜನೆಯ ವ್ಯಾಪ್ತಿಯ ಗ್ರಾಮಗಳು ಸ್ವಚ್ಛ ಭಾರತ್ ಅಡಿಯಲ್ಲಿ ಶೌಚಾಲಯಗಳನ್ನು ನಿರ್ಮಿಸಿಕೊಳ್ಳಬೇಕು. ಅಲ್ಲದೆ ಮಳೆ ನೀರು ಕೊಯ್ಲು, ಕೃಷಿ ಹೊಂಡಗಳ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಅವರು ತಿಳಿಸಿದರು.

ಭಾರತೀಯ ವಿಜ್ಞಾನಸಂಸ್ಥೆ ರೂಪಿಸಿದ್ದ ಬಯೋ ಮಾಸ್ ಗ್ಯಾಸಿ ಫೈಯರ್‌ನ್ನು ಮೊದಲ ಬಾರಿಗೆ ಈ ಭಾಗದಲ್ಲಿ ಅನುಷ್ಠಾನಗೊಳಿಸಲಾಗಿತ್ತು. ಇದರ ಮೂಲಕ ವಿದ್ಯುತ್‌ನ್ನು ಸ್ಥಳೀಯವಾಗಿ ಈ ಯೋಜನೆಯ ಗ್ರಾಮಗಳಿಗೆ ವಿತರಿಸುವ ಕಾರ್ಯವನ್ನು ಮಾಡಲಾಗಿತ್ತು. ಆದರೆ ಸೋಲಾರ್ ಘಟಕ ಈ ಭಾಗದಲ್ಲಿ ಸ್ಥಾಪಿಸುವಂತೆ ಜನರು ಕೋರಿರುವುದರಿಂದ ಈ ವ್ಯಾಪ್ತಿಯಲ್ಲಿ ಸೋಲಾರ್ ಘಟಕ ಹಾಗೂ ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ ನೀಡುವ ಕೌಶಲ್ಯ ಅಭಿವೃದ್ಧಿ

7ನೇ ಪುಟಕ್ಕೆ

# ಕೇಂದ್ರದ ನೆರವು ಕೋರಲು ಸರ್ಕಾರದ ತೀರ್ಮಾನ

## 61 ತಾಲ್ಲೂಕುಗಳನ್ನು ಬರಪೀಡಿತವೆಂದು ಪರಿಗಣಿಸಿ ಪರಿಹಾರ ನೀಡಿ

ಬೆಂಗಳೂರು

ರಾಜ್ಯಾದ್ಯಂತ ಸೆಪ್ಟೆಂಬರ್ ತಿಂಗಳಲ್ಲಿ ಸುರಿದ ಮಳೆ ಹಿನ್ನೆಲೆಯಲ್ಲಿ ಒಂದೂ ಬರಪೀಡಿತ ತಾಲ್ಲೂಕು ಇಲ್ಲ ಎಂದು ಕೇಂದ್ರ ಹೇಳುತ್ತಿದ್ದರೆ, ಆಗಸ್ಟ್ ತಿಂಗಳ ತನಕ ಬರದಿಂದಾಗಿ ಸಂಪೂರ್ಣ ಬೆಳೆಹಾನಿಯಾಗಿದ್ದು 61 ತಾಲ್ಲೂಕುಗಳನ್ನು ಬರಪೀಡಿತ ಎಂದು ಪರಿಗಣಿಸಿ ಪರಿಹಾರ ನೀಡಬೇಕು ಎಂದು ಕರ್ನಾಟಕ ಇದೀಗ ಬಲವಾಗಿ ಪ್ರತಿಪಾದನೆ ಮಾಡುತ್ತಿದೆ.

ಸೆಪ್ಟೆಂಬರ್ ತಿಂಗಳಲ್ಲಿ ಸುರಿದ ಮಳೆಯಿಂದ ಕುಡಿಯುವ ನೀರಿಗೆ ಕೊರತೆ ಇಲ್ಲ, ಜಾನುವಾರುಗಳ ಮೇವಿಗೂ ಸಮಸ್ಯೆಯಿಲ್ಲ, ಆದರೆ ರೈತರ ಸಂಕಷ್ಟಕ್ಕೆ ಕೊನೆಯಿಲ್ಲ ಎಂಬುದು ರಾಜ್ಯದ ವಾದ.

ಇದೇ ಹಿನ್ನೆಲೆಯಲ್ಲಿ ಮುಂದಿನ ಹತ್ತು ದಿನಗಳ ಒಳಗಾಗಿ ಎಲ್ಲ ಜಿಲ್ಲೆಗಳಿಂದ ವರದಿ ತರಿಸಿ ಆಗಿರುವ ನಷ್ಟದ ಪ್ರಮಾಣವನ್ನು ಗಮನಿಸಿ ಕೇಂದ್ರ ಸರ್ಕಾರದಿಂದ ನೆರವು ಕೋರಲು ಸರ್ಕಾರ ತೀರ್ಮಾನಿಸಿದೆ.

ಆಗಸ್ಟ್ ತಿಂಗಳ ಅಂತ್ಯದವರೆಗಿನ ಪರಿಸ್ಥಿತಿ ಹಾಗಿಲ್ಲ. ಆ ಸಂದರ್ಭದಲ್ಲಿ ಅರವತ್ತೊಂದು ತಾಲ್ಲೂಕುಗಳು ಬರಪೀಡಿತವಾಗಿದ್ದವು. ಬೆಂಗಳೂರು ನಗರ, ಗ್ರಾಮಾಂತರ, ಮಂಡ್ಯ, ರಾಯಚೂರು, ದಾವಣಗೆರೆ, ತುಮಕೂರು, ಚಿತ್ರದುರ್ಗ ಸೇರಿದಂತೆ ವಿವಿಧ ಜಿಲ್ಲೆಗಳ ಅರವತ್ತೊಂದು ತಾಲ್ಲೂಕುಗಳು ಬರಪೀಡಿತ ಪಟ್ಟಿಯಲ್ಲಿದ್ದವು.

ಇಲ್ಲೆಲ್ಲ ಬಿತ್ತಿದ ಬೆಳೆ ಸಂಪೂರ್ಣ ಹಾಳಾಗಿತ್ತು. ಅದೇ ರೀತಿ ಈಗ ಮಳೆ ಬಿದ್ದರೂ ಸೈನಿಕ ಹುಳುವಿನ ದಿಢೀರ್ ಆಕ್ರಮಣದಿಂದ ರಾಜ್ಯದೆಲ್ಲೆಡೆ ರೈತರ ಹೊಲಗಳು ನಾಶವಾಗಿವೆ. ಬೆಳೆದ ಬೆಳೆ ದೊಡ್ಡ ಪ್ರಮಾಣದಲ್ಲಿ ಹಾಳಾಗಿದೆ.

ಹೀಗೆ ಮುಂಗಾರು ಹಂಗಾಮಿನಲ್ಲಿ ಆಗಸ್ಟ್ ಅಂತ್ಯದ ವೇಳೆಗೆ ಇದ್ದ ಪರಿಸ್ಥಿತಿಯಿಂದ ಆಗಬೇಕಾದ ಹಾನಿ ಆಗಿದೆ. ಬಿತ್ತಿದ ಬೆಳೆ ನಾಶವಾಗಿದೆ. ಆದರೆ ಸೆಪ್ಟೆಂಬರ್ ಅಂತ್ಯದ ವೇಳೆಗೆ ಬಿದ್ದ ಮಳೆಯ ಪ್ರಮಾಣವನ್ನು ಗಮನಿಸಿ, ಕೇಂದ್ರದ ಮಾರ್ಗಸೂಚಿಯನ್ನು ಅನ್ವಯಿಸಿದರೆ ಒಂದು ತಾಲ್ಲೂಕು ಬರಪೀಡಿತವಲ್ಲ. ಹೀಗಾಗಿ ಕೇಂದ್ರ ಸರ್ಕಾರ ತನ್ನ ಪ್ರಕೃತಿ ವಿಕೋಪ ನಿಧಿಯಿಂದ ಪರಿಹಾರ ನೀಡುವುದಿಲ್ಲ.

ಬದಲಿಗೆ ರಾಜ್ಯದ ಪಾಲಿಗೆ ಮೀಸಲಿಟ್ಟ 367 ಕೋಟಿ ರೂಪಾಯಿ ಮಾತ್ರ ನಮಗೆ ದಕ್ಕಬಹುದು ಅಷ್ಟೆ. ಆದರೆ ಅದರಲ್ಲೂ ಬೇರೆ ರಾಜ್ಯಗಳಿಗೆ ಒಂದೂವರೆ ಸಾವಿರದಿಂದ ಎರಡು ಸಾವಿರ ಕೋಟಿ ರೂಗಳಷ್ಟು ಹಣವನ್ನು ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿ ಒದಗಿಸಿದರೆ ನಮಗೆ ಅಲ್ಪ ಮೊತ್ತವನ್ನು ನಿಗದಿಪಡಿಸಿದೆ.

ಈ ಹಿಂದೆ ಶೇಕಡಾ ಶೇಕಡಾ 20 ರಷ್ಟು ಮಳೆಯ ಕೊರತೆ ಇದ್ದರೆ ಆಯಾ ತಾಲ್ಲೂಕನ್ನು ಬರಪೀಡಿತ ಎಂದು ಘೋಷಿಸಬಹುದಿತ್ತು. ಆದರೆ ಈಗ ಶೇಕಡಾ 60 ರಷ್ಟು ಪ್ರಮಾಣದ ಮಳೆಯ ಕೊರತೆ ಇದ್ದರೆ ಮಾತ್ರ ಬರಪೀಡಿತ ತಾಲ್ಲೂಕು ಎಂದು ಘೋಷಿಸಬಹುದು.

ಶೇಕಡಾ ಐವತ್ತರಷ್ಟು ಬೆಳೆ ನಷ್ಟವಾದರೆ ಮಾತ್ರ ಬೆಳೆ ನಷ್ಟ ಎಂದು ಈಗ ಪರಿಗಣಿಸಲಾಗುತ್ತದೆ. ಇದೇ ರೀತಿ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಹೋದರೆ ರಾಜ್ಯದಲ್ಲಿ ಈ ವರ್ಷ ಒಂದೂ ಬರಪೀಡಿತ ತಾಲ್ಲೂಕು ಇಲ್ಲ.

ಆದರೆ ಆಗಸ್ಟ್ ತಿಂಗಳವರೆಗೆ ಮಳೆ ಕೈ ಕೊಟ್ಟ ಪರಿಣಾಮವಾಗಿ ಆಗಿರುವ ಬೆಳೆ ಹಾನಿ, ಸೈನಿಕಹುಳಗಳಿಂದ ಆಗಿರುವ ಭಾರೀ ಪ್ರಮಾಣದ ನಷ್ಟವನ್ನು ಪರಿಗಣಿಸಿದರೆ ರಾಜ್ಯಕ್ಕೆ ಅಪಾರ ಪ್ರಮಾಣದ ನಷ್ಟವಾಗಿದೆ.

ಹೀಗಾಗಿ ಕೇಂದ್ರ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ ರಾಜ್ಯಕ್ಕ ನೆರವು ನೀಡಲೇಬೇಕು. ಈ ಹಿಂದೆ ಹಲವು ಯೋಜನೆಗಳಿಗೆ ಕೇಂದ್ರ ಸರ್ಕಾರ ಶೇಕಡಾ 90 ರಷ್ಟು ಹಣ ಒದಗಿಸುತ್ತಿತ್ತು. ಶೇಕಡಾ 75 ರಷ್ಟು

8ನೇ ಪುಟಕ್ಕೆ

> ಕೇಂದ್ರ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ ರಾಜ್ಯಕ್ಕ ನೆರವು ನೀಡಲೇಬೇಕು. ಈ ಹಿಂದೆ ಹಲವು ಯೋಜನೆಗಳಿಗೆ ಕೇಂದ್ರ ಸರ್ಕಾರ ಶೇಕಡಾ 90 ರಷ್ಟು ಹಣ ಒದಗಿಸುತ್ತಿತ್ತು. ಶೇಕಡಾ 75 ರಷ್ಟು ಅನುದಾನ ನೀಡುತ್ತಿತ್ತು. ಆದರೆ ಈಗ ಅನುದಾನದ ಪ್ರಮಾಣವನ್ನು ಕಡಿತಗೊಳಿಸಿ ಶೇಕಡಾ ನಲವತ್ತು,ಐವತ್ತರಷ್ಟನ್ನು ಮಾತ್ರ ನೀಡುತ್ತಿದೆ. ಆಗಸ್ಟ್ ತನಕ ಸುರಿಯದ ಮಳೆ ಏಕಾಏಕಿ ಸೆಪ್ಟೆಂಬರ್‌ನಲ್ಲಿ ಸುರಿದ ಪರಿಣಾಮವಾಗಿ ರಾಜ್ಯದ ಬಹುತೇಕ ಕೆರೆಗಳು, ಅಣೆಕಟ್ಟುಗಳು ತುಂಬಿವೆ. ಕುಡಿಯುವ ನೀರಿನ ಕೊರತೆ, ಜಾನುವಾರುಗಳಿಗೆ ಮೇವಿನ ಕೊರತೆ ಇಲ್ಲದಂತಾಗಿದೆ.

# ಅಕ್ಷರ ಪ್ರೀತಿಯ ಜೊತೆಗೆ ಜೀವನ ಪ್ರೀತಿಯ ಮೌಲ್ಯ ತಿಳಿಸಿದ ಲೇಖಕಿ

## ಎಂ.ಕೆ.ಇಂದಿರಾ ಶತಮಾನದ ನೆನಪು ಕಾರ್ಯಕ್ರಮದಲ್ಲಿ ವಿಜಯ ಶಂಕರ್ ಅಭಿಮತ

ತುಮಕೂರು

ಎಂ.ಕೆ. ಇಂದಿರಾ ಮಹತ್ವಾಕಾಂಕ್ಷೆ ಅಸ್ತಿತ್ವವಾದಿ ಲೇಖಕಿ ಅಲ್ಲ, ಅವರು ಒಬ್ಬ ಬದುಕಿನ ಪ್ರೀತಿ, ಅಕ್ಷರ ಪ್ರೀತಿಯನ್ನು ನಮ್ಮಲ್ಲಿ ಮೂಡಿಸಿದ ಲೇಖಕಿ ಎಂದು ಖ್ಯಾತ ವಿಮರ್ಶಕ ಎಸ್.ಆರ್. ವಿಜಯಶಂಕರ್ ಅಭಿಪ್ರಾಯ ವ್ಯಕ್ತಪಡಿಸಿದರು.

ಮಹಿಳಾ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಇವರ ಸಂಯುಕ್ತಾಶ್ರಯದಲ್ಲಿ ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ಎಂ.ಕೆ. ಇಂದಿರಾ ಅವರ ಶತಮಾನದ ನೆನಪು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವರ್ತಮಾನದ ಜೊತೆಗೆ ಇತಿಹಾಸವೂ ಮುಖ್ಯ. ಇಂತಹ ನೆಲೆಯಲ್ಲಿ ಎಂ.ಕೆ. ಇಂದಿರಾ ಅವರ ಶತಮಾನದ ನೆನಪು ಅಗತ್ಯ ಎಂದರು. ಸ್ತ್ರೀವಾದಿ ನೆಲೆಯಲ್ಲಿ ಅಕ್ಷರದ ಪ್ರೀತಿಯನ್ನು ಬೆಳೆಸಿದ ಲೇಖಕಿ ಹಾಗೂ ಉದಾರ ಮಾನವತಾವಾದದ ನೆಲೆಯಲ್ಲಿ ಕಾದಂಬರಿಯನ್ನು ನಮಗೆ ಕಟ್ಟಿಕೊಟ್ಟಿದ್ದಾರೆ. ಬದುಕಿನ ಸಂತೋಷ, ಸಮೃದ್ಧಿ, ಮನುಷ್ಯತ್ವದ ವಿಚಾರಗಳನ್ನು ಸರಳವಾದ ನೆಲೆಯಲ್ಲಿ ತಿಳಿಸಿದ್ದಾರೆ ಎಂದರು.

ಗಂಡಾಗಲಿ, ಹೆಣ್ಣಾಗಲಿ ಆತನಿಗೆ ಇರುವ ಸ್ಥಿತಿಯನ್ನು ನಾವು ಗೌರವಿಸಿ ಮನುಷ್ಯತ್ವದ ಘನತೆಯ ಪಾಠವನ್ನು ತಿಳಿಸಿದವರು ಇವರು. ತಮ್ಮ



ಜೀವನಾನುಭವದ ನೆಲೆಯಲ್ಲಿ ಕಾದಂಬರಿಗಳನ್ನು ಕಟ್ಟಿದರೇ ಹೊರತು, ವೈಚಾರಿಕ ನೆಲೆಯಲ್ಲಿ ಕಟ್ಟಲಿಲ್ಲ, ಕಾದಂಬರಿ ಎನ್ನುವುದು ಸಂಪೂರ್ಣ ಕಲ್ಪಿತವೂ ಅಲ್ಲಾ, ಜೀವನದಲ್ಲಿ ನಡೆದಿದ್ದ ಅನುಭವವೂ ಅಲ್ಲಾ, ಇವೆರಡರ ಮಿಶ್ರಣವಾಗಿದೆ ಎಂದರು.

ನಾವು ಜೀವನದಲ್ಲಿ ಕಳೆದುಕೊಳ್ಳುವುದೇನು, ಪಡೆದುಕೊಳ್ಳುವುದೇನು ಎನ್ನುವ ಜೀವನದ ಮೌಲ್ಯಗಳನ್ನು ತಿಳಿಸುವಂತಹ ಕೆಲಸ ಮಾಡಿದ್ದ ಲೇಖಕಿ ಇವರು. ಮನುಷ್ಯನ ಸಂಬಂಧ ಹೇಗಿರಬೇಕು. ಬದುಕಿನ ಸಮಸ್ಯೆಗಳಿಗೆ ಹೇಗೆ ಪರಿಹಾರ ಕಂಡುಕೊಳ್ಳಬೇಕೆಂಬುದನ್ನು ವಿವರಿಸಿದ ಅವರು, ನಮ್ಮ ಸಂಸ್ಕೃತಿ, ಧರ್ಮ, ಆಚಾರ ವಿಚಾರಗಳನ್ನು ಪರೀಕ್ಷಿಸದೆ ಪ್ರಚಾರ ಮಾಡುತ್ತಿರುವಂತಹ ಸಾರ್ವಜನಿಕರು ಇದ್ದಾರೆ.

7ನೇ ಪುಟಕ್ಕೆ

# 10 ವರ್ಷಗಳ ನಂತರ ಹರಿದ ಜಯಮಂಗಲಿ



ಬ್ಯಾಲ್ಯ

ದೇವರಾಯನದುರ್ಗದಲ್ಲಿ ಹುಟ್ಟಿ ಕೊರಟಗೆರೆ ಮತ್ತು ಮಧುಗಿರಿ ತಾಲ್ಲೂಕುಗಳಲ್ಲಿ ಹರಿಯುತ್ತಾ ಅಂತರ್ಜಲ ಹೆಚ್ಚಿಸುತ್ತಾ ರೈತರ ಬಾಳಿನ ಭಾಗ್ಯದೇವತೆ ಜಯಮಂಗಲಿ ನದಿ ಮುನಿದು 10 ವರ್ಷಗಳೇ ಆಗಿದ್ದವು. ಆದರೆ ಇತ್ತೀಚೆಗೆ ಬೀಳುತ್ತಿರುವ ಮಳೆಯಿಂದಾಗಿ ಇದೀಗ ಮೈದುಂಬಿ ಹರಿಯುತ್ತಿದೆ.

ತುಂಬಿ ಹರಿಯುತ್ತಿರುವ ಈ ನದಿಯನ್ನು ಸುತ್ತಮುತ್ತಲಿನ ಗ್ರಾಮಸ್ಥರು ನೋಡಿ ಆನಂದಿಸಿದರು. ಕೆಲ ಗ್ರಾಮೀಣ ಮಹಿಳೆಯರು ಗಂಗೆಯ ಕುರಿತಾದ ಹಾಡುಗಳನ್ನು ಭಕ್ತಿಪರವಶವಾಗಿ ಹಾಡುವ ಮೂಲಕ ಪೂಜೆ ಸಲ್ಲಿಸಿದರು. ಹನುಮಂತಪುರ ಸೇತುವೆಯ ಮೇಲೆ ಜಮಾಯಿಸಿದ್ದ ಜನರ ಮುಖದಲ್ಲಿ ಸಂಸತ ತುಂಬಿತ್ತು.

ಬ್ಯಾಲ್ಯ ಗ್ರಾಮಸ್ಥರು ಮತ್ತು ಗ್ರಾಮ ಪಂಚಾಯತಿಯಿಂದ ನದಿಗೆ ಪೂಜೆ ಸಲ್ಲಿಸಿ ಬಾಗಿನ ಅರ್ಪಿಸಲಾಯಿತು. ಬ್ಯಾಲ್ಯ ಗ್ರಾ.ಪಂ.ಅಧ್ಯಕ್ಷರಾದ ಪವಿತ್ರ, ಕಾರ್ಯದರ್ಶಿ ಗೋಪಾಲಕೃಷ್ಣ ಮತ್ತು ಸಿಬ್ಬಂದಿ ವರ್ಗ ಹಾಗೂ ಗ್ರಾಮಸ್ಥರು ಹಾಜರಿದ್ದರು.

# ಅನಾರೋಗ್ಯದ ಮಡಿಲಲ್ಲಿ ಶುಚಿತ್ವ ಕಾಪಾಡುವ ಜನ ಸೂರಿಲ್ಲದ ಸಂಕಷ್ಟದಲ್ಲಿ ಸಫಾಯಿ ಕರ್ಮಚಾರಿಗಳು

♦ಭೂಷಣ್ ಮಿಡಿಗೇಶಿ

ತುಮಕೂರು

ಇವರೇನಾದರೂ ಪೊರಕೆ,ಗುದ್ದಲಿ,ಮಂಕರಿ, ಸಲಿಕೆಗಳನ್ನು ಬಿಸಾಕಿ, ಒಂದೆರಡು ದಿನ ಕೆಲಸ ಮಾಡದೆ ಹೋದರೆ ಇಡೀ ಊರಿಗೆ ಊರೇ ಗಬ್ಬೆದ್ದುನಾರುತ್ತವೆ.ನಗರಗಳು ಕಸದ ಕೂಪಗಳಾಗಿ ಅನೈರ್ಮಲ್ಯದ ತಾಣಗಳಾಗುತ್ತವೆ.ಮಾನವ ಸಹಜ ತ್ಯಾಜ್ಯಗಳೇ ಅಲ್ಲದೆ, ಸತ್ತ ಪ್ರಾಣಿಗಳ ಕೊಳೆತ ದೇಹಗಳನ್ನೂ ಇವರೇ ಶುಚಿಗೊಳಿಸಬೇಕು. ಯಾವುದೇ ರಕ್ಷಾಕವಚಗಳನ್ನು ಗಂಭೀರವಾಗಿ ಪರಿಗಣಿಸದೆ ಬರಿಗೈಯಿಂದಲೇ ಸ್ವಚ್ಛಗೊಳಿಸಿ, ಅನಾರೋಗ್ಯದ ಮಡಿಲಿನಲ್ಲಿಯೇ ಸದಾ ಮಲಗುವ, ಅಸಹ್ಯಕರ, ವಾಕರಿಕೆ ಬರುವಂತಹ ಕೆಲಸಗಳನ್ನು ನೀರು ಕುಡಿದಷ್ಟೇ ಸಲೀಸಾಗಿ ಮಾಡಿ ಮುಗಿಸಿ,ಸಮಾಜದಲ್ಲಿ ಬದುಕು ನಡೆಸುತ್ತಿರುವ ಇವರು ಅಮಲಿನಲ್ಲಿಯೇ ಕೆಲಸಮಾಡುವುದು ಬಹು ಸಾಮಾನ್ಯ. ಬಹುತೇಕ ಎಲ್ಲಾ ಗ್ರಾಮಗಳಲ್ಲಿಯೂ ಬಹಳ ಹಿಂದಿನಿಂದಲೂ ಅಸ್ತಿತ್ವದಲ್ಲಿರುವ ಈ ಸ್ವಚ್ಛತೆಯ ಜವಾಬ್ದಾರಿಯನ್ನು ಹೊತ್ತಿರುವ ಸಫಾಯಿ ಕರ್ಮಚಾರಿಗಳ ಜೀವನ ಮಾತ್ರ ಚಿಂತಾಜನಕವಾಗಿದೆ. ನೇರವಾಗಿ ಅನಾರೋಗ್ಯದ ಹೊಸ್ತಿಲಿನಲ್ಲಿಯೇ ಕಾಯಕ ಮಾಡುವ ಇವರ ಬದುಕು ಮಾತ್ರ ಮೂರಾಬಟ್ಟೆಯಾಗುತ್ತಿದೆ. ಸರ್ಕಾರದಿಂದ ಸಾಕಷ್ಟು ಸೌಲಭ್ಯಗಳಿದ್ದರೂ ಅನುಷ್ಠಾನ ಮಾಡುವ ಮನಸ್ಸಿಲ್ಲದೆ, ಈ ಸಮುದಾಯದ ಬಗ್ಗೆ ಸಂಬಂಧಿಸಿದವರು ಕನಿಷ್ಠ ಕಾಳಜಿಯನ್ನಾದರೂ ತೋರದೆ ಇರುವುದು ದುರಂತ.

**ಸಾವಿರಕ್ಕೂ ಹೆಚ್ಚು ಕರ್ಮಚಾರಿಗಳು-ನೂರಕ್ಕೂ ಕಡಿಮೆ ಮನೆಗಳು:** ತುಮಕೂರು ಜಿಲ್ಲೆಯಲ್ಲಿ ಗುರ್ತಿಸಿರುವ ಒಟ್ಟು ಸಫ್ಾಯಿ ಕರ್ಮಚಾರಿಗಳ ಸಂಖ್ಯೆ 1014.ಇದೇ ವೃತ್ತಿಯನ್ನು ನಂಬಿಕೊಂಡು ಬದುಕುತ್ತಿರುವ ಇವರ ಅವಲಂಬಿತರ ಸಂಖ್ಯೆ 1775.ಇತ್ತೀಚಿನ ಸಮೀಕ್ಷೆಗಳ ಪ್ರಕಾರ 3250 ಕ್ಕೂ ಹೆಚ್ಚು ಜನ ಈ ವೃತ್ತಿಯನ್ನು ಅವಲಂಬಿಸಿದ್ದಾರೆ ಎಂಬ ಮಾಹಿತಿಗಳೂ ಇವೆ.ತುಮಕೂರು ಜಿಲ್ಲೆಯಲ್ಲಿರುವ ಹತ್ತು ನಗರ ಸ್ಥಳೀಯ ಸಂಸ್ಥೆಗಳ ವಾಪ್ತಿಯಲ್ಲಿ ಕೆಲಸಮಾಡುವ ಸಫಾಯಿ ಕರ್ಮಚಾರಿಗಳಿಗೆ ಬೆಳಗಿನ ಉಪಾಹಾರದಿಂದ ಹಿಡಿದು, ವಸತಿ ಸೌಕರ್ಯ, ಶೌಚಾಲಯ ನಿರ್ಮಾಣ, ಸಫಾಯಿ ಕರ್ಮಚಾರಿಗಳ ಮಕ್ಕಳಿಗೆ ಶಿಕ್ಷಣಕ್ಕೆ ಅನುಕೂಲವಾಗುವಂತೆ ವಿದ್ಯಾರ್ಥಿ ವೇತನ, ಕೈಗವಸುಗಳ ಜೊತೆ ಇತರೆ ರಕ್ಷಣಾ ಸಾಮಗ್ರಿಗಳು, ಸಮವಸ್ತ್ರ,ಸ್ವಯಂ ಉದ್ಯೋಗಕ್ಕಾಗಿ ಸಾಲ ಸೌಲಭ್ಯ, ಕೌಶಲ್ಯ ತರಬೇತಿಗಳು ಹಾಗೂ ಪೌರ ಕಾರ್ಮಿಕರ ದಿನಾಚರಣೆಗೆ ಸಹಾಯಧನ ನೀಡುವ ಸೌಲಭ್ಯಗಳನ್ನು ಕಡ್ಡಾಯವಾಗಿ ಮಾಡಲೇಬೇಕು.

ತುಮಕೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಗುರ್ತಿಸಿರುವ ಸಫ್ಾಯಿ ಕರ್ಮಚಾರಿಗಳ ಸಂಖ್ಯೆ ಒಟ್ಟು 434.ಇದರಲ್ಲಿ ಕೇವಲ 24 ಜನರಿಗೆ ಮಾತ್ರ ವಸತಿ ಸೌಕರ್ಯವನ್ನು ಕಲ್ಪಿಸಿಕೊಡಲಾಗಿದೆ. ಇದಕ್ಕೆಂದು 38 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಇನ್ನುಳಿದ ಸಫಾಯಿ ಕರ್ಮಚಾರಿಗಳಿಗೆ ತಲೆಯ ಮೇಲೊಂದು ಸೂರು ನಿರ್ಮಿಸಿಕೊಡುವ ಕನಿಷ್ಠ ಮಾನವೀಯತೆಯನ್ನೂ ಮಹಾನಗರಪಾಲಿಕೆ ತೋರಿಸಿಲ್ಲದೆ ಇರುವುದು ದೌರ್ಭಾಗ್ಯ. ಆರೋಗ್ಯದ ಹಿತದೃಷ್ಟಿಯಿಂದ ಮನೆಗೊಂದು ಶೌಚಾಲಯ ಇರಬೇಕಾಗುತ್ತದೆ. ಅನೈರ್ಮಲ್ಯದ ವಾತಾವರಣದಲ್ಲಿ ಕೆಲಸಮಾಡುವ ಸಫ್ಾಯಿ ಕರ್ಮಚಾರಿಗಳಿಗೇ ಶೌಚಾಲಯದ ಭಾಗ್ಯ ಸಿಕ್ಕಿಲ್ಲದೆ ಇರುವುದು ದುರದೃಷ್ಟಕರ. ಕೇವಲ 9 ಶೌಚಾಲಯಗಳನ್ನು ಈ ಸಮುದಾಯದವರಿಗೆ ನಿರ್ಮಿಸಿಕೊಟ್ಟಿರುವ ತುಮಕೂರು ಮಹಾನಗರ ಪಾಲಿಕೆಯ ಕಾರ್ಯವೈಖರಿಗೆ ಏನೆನ್ನಬೇಕೋ ತಿಳಿಯದು.

ತಿಪಟೂರು ನಗರಸಭೆಯಲ್ಲಿ ಗುರ್ತಿಸಲಾಗಿರುವ ಸಫ್ಾಯಿ ಕರ್ಮಚಾರಿಗಳ ಸಂಖ್ಯೆ 101 ಇದ್ದು, ಇದರಲ್ಲಿ ಕೇವಲ 23 ಜನರಿಗೆ ಮಾತ್ರ

7ನೇ ಪುಟಕ್ಕೆ

> ಕರ್ನಾಟಕ ಸರ್ಕಾರದ ವತಿಯಿಂದ ಈ ಸಾಲಿನ ಆಯವ್ಯಯದಲ್ಲಿ ಸಫ್ಾಯಿ ಕರ್ಮಚಾರಿಗಳನ್ನು ಸಮಾಜದ ಮುಖ್ಯವಾಹಿನಿಗೆ ತರುವ ಸಲುವಾಗಿ ಪ್ರತ್ಯೇಕ ನಿಗಮವೊಂದನ್ನು ಸ್ಥಾಪಿಸಲಾಗಿದೆ. ಇದಕ್ಕೆಂದು 80 ಕೋಟಿ ರೂಪಾಯಿಗಳ ಹಣಕಾಸಿನ ನೆರವನ್ನೂ ನೀಡಲಾಗಿದೆ.ಈ ನಿಗಮದಲ್ಲಿ ವಸತಿ ಕೊರತೆಯಿರುವ ಸಫ್ಾಯಿ ಕರ್ಮಚಾರಿಗಳ ಕಾಲೊನಿಗಳ ಕುಟುಂಬಗಳ ಅಗತ್ಯತೆಯನ್ನು ಆಧರಿಸಿ ನಿವೇಶನ ಒದಗಿಸುವುದು. ಸಫ್ಾಯಿ ಕರ್ಮಚಾರಿಗಳ ವಾಸಿಸುತ್ತಿರುವ ಕಾಲೊನಿಗಳ ಪಕ್ಕದಲ್ಲಿ ಜಮೀನು ಖರೀದಿಸಿ ಸಫ್ಾಯಿ ಕರ್ಮಚಾರಿಗಳ ಬಡಾವಣೆಯನ್ನು ನಿರ್ಮಿಸುವುದು.ಹತ್ತಿರವಿರುವ ಮೂರ್ನಾಲ್ಕು ಸಫ್ಾಯಿ ಕರ್ಮಚಾರಿಗಳ ಕಾಲೊನಿಗಳ ಪರಿಧಿಯಲ್ಲಿ ಸರ್ಕಾರಿ ಅಥವಾ ಖಾಸಗಿ ಜಮೀನು ಪಡೆದು ಬಡಾವಣೆಯನ್ನು ನಿರ್ಮಿಸಿ ಕರ್ನಾಟಕ ಗೃಹ ಮಂಡಳಿ ಅಥವಾ ಇನ್ಯಾವುದೇ ವಸತಿ ಯೋಜನೆಗಳಡಿಯಲ್ಲಿ ಮನೆಗಳನ್ನು ಕಟ್ಟಿಸಿಕೊಡಬೇಕಿದೆ.

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಹನುಮಂತರಾಯಪ್ಪನವರು
ಮಾಜಿ ಅಧ್ಯಕ್ಷರು, ನಗರಸಭೆ ಹಾಗೂ ಮಾಲೀಕರು,
ಮಾರುತಿ ವೈಭವ್ ಕಂಫರ್ಟ್ & ಮಾರುತಿ ಎಸ್ಟೇಟ್, ತುಮಕೂರು.
ನೀವು ನಮ್ಮನ್ನಗಲಿ ಇಂದಿಗೆ 14 ವರ್ಷಗಳಾದವು ನಿಮ್ಮ ಆದರ್ಶ ಜೀವನ ನಮಗೆ ದಾರಿ ದೀಪವಾಗಿದೆ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ
ಪತ್ನಿ: ಶ್ರೀಮತಿ ಹನುಮಕ್ಕ ಮತ್ತು ಮಕ್ಕಳು
ಅಳಿಯಂದಿರು ಹಾಗೂ ಮೊಮ್ಮಕ್ಕಳು